ಕೆಲಸ ಹಿಡಿದಿದ್ದರೆ ಚೆನ್ನಾಗಿತ್ತು ಎನ್ನುವ ಅನಿಸಿಕೆ. ಅವನ ಅಕ್ಕ, ಭಾವನಿಗೂ ಅಷ್ಟೇ, ಎಲ್ಲಾ ಬಿಟ್ಟು ಇವನ್ಯಾಕೆ ಹಳ್ಳಿಗೆ ಬಂದು ಸೇರ್ಕೊಂಡಿದ್ದಾನೆ ಎನ್ನುವ ಮುಜುಗರ.

ಕಾರ್ತೀಕನನಿಗೇನೂ ಅಂತಹ ಹೊಯ್ದಾಟಗಳಿದ್ದಂತೆ ಕಾಣಲಿಲ್ಲ. ಹಳ್ಳಿಗೆ ಬಂದವನೆ, ಗದ್ದೆ ತೋಟದ ಕೆಲಸದಲ್ಲಿ ತೊಡಗಿಕೊಂಡ. ಬ್ಯಾಂಕಿನಿಂದ ಸಾಲ ತೆಗೆದು ಪಾಲಿ ಹೌಸ್ ಮಾಡಿ, ಆ್ಯಂಥೂರಿಯ, ಜರ್ಬೆರ, ಗುಲಾಬಿ ಹೂವು ಬೆಳೆಯಲು ಸುರು ಹಚ್ಚಿಕೊಂಡ. ಸಣ್ಣ ಮಟ್ಟದ ಶೈತ್ಯಾಗಾರವನ್ನು ಕಟ್ಟಿ ಕತ್ತರಿಸಿದ ಹೂವನ್ನು ಸಂಸ್ಕರಿಸಿ ಪ್ಯಾಕ್ ಮಾಡಿ ವಾರಕ್ಕೆ ಮೂರು ದಿನ ಬೆಂಗಳೂರಿಗೆ ಕಳುಹಿಸುತ್ತಿದ್ದ. ವ್ಯವಹಾರ ಚೆನ್ನಾಗಿ ಕುದುರಿದ ಮೇಲೆ, ಖುಷ್ಕಿ ಜಮೀನಿನಲ್ಲಿಯೇ ಹನಿ ನೀರಾವರಿ ಪದ್ಧತಿಯನ್ನು ಬಳಸಿ, ಎಲ್ಲರೂ ಅಚ್ಚರಿಗೊಳ್ಳುವಂತೆ ಕಬ್ಬು ಬೆಳೆಯ ತೊಡಗಿದ. ಇದುವರೆಗೂ ಬೀಳು ಬಿಟ್ಟಿದ್ದ ತಮ್ಮ ತಿಟ್ಟಿನ ಜಮೀನಿನಲ್ಲಿ ಅದೇ ಹನಿ ನೀರಾವರಿ ಬಳಸಿ, ಹುಣಸೆ ಮತ್ತು ಮಾವುಗಳ ತೋಟ ಬೆಳೆಸತೊಡಗಿದ.

ತೆಂಗಿನ ಮರ ಹತ್ತಿ ಕಾಯಿ ಕೀಳುವುದು, ಅಡಿಕೆ ಮರ ಹತ್ತಿ ಸ್ಪ್ರೇ ಮಾಡುವುದು, ಇಂತಹ ಶ್ರಮದ ಕೆಲಸದಲ್ಲಿ ತನ್ನ ಓರಗೆಯ ಕೆಲಸದಾಳುಗಳ ಜೊತೆ ತಮಾಷೆಯ ಪೈಪೋಟಿಗಿಳಿಯುತ್ತಿದ್ದ.

ಹೊಸ ಕೃಷಿ ಪದ್ಧತಿ ಮತ್ತು ಸುಧಾರಿಸಿದ ತಳಿಗಳನ್ನು ಬಳಸಿ ಬಾಳೆ, ಟೊಮ್ಯಾಟೊ, ದೊಡ್ಡ ಮೆಣಸಿನಕಾಯಿಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆದು ಸಾಕಷ್ಟು ಹಣವನ್ನು ಗಳಿಸಹತ್ತಿದ. ಕೃಷಿಯ ಬಗ್ಗೆ ನಿರಾಸಕ್ತಿ ತಳೆದು ಇತರ ಪಡ್ಡೆ ಹುಡುಗರೊಂದಿಗೆ ಇಸ್ಪೀಟ್ ಆಡುತ್ತಲೊ, ಇಲ್ಲಾ ಗುಟ್ಕಾ ಜಗಿಯುತ್ತಲೊ ಕಾಲ ಕಳೆಯುತ್ತಿದ್ದ ಸುತ್ತಮುತ್ತಲ ಹಳ್ಳಿಯ ಹಲವಾರು ಯುವಕರು ಇವನ ಚಟುವಟಿಕೆಗಳನ್ನು ಗಮನಿಸಿ ಆಸಕ್ತಿ ತಳೆದು ತಾವು ಕೂಡ ಮನೆಯ ಪಾರಂಪರಿಕ ಕೃಷಿಯಲ್ಲಿ ತೊಡಗಿಸಿಕೊಳ್ಳತೊಡಗಿದರು. ಅಂತಹ ಯುವಕರ ತಂದೆ ತಾಯಿಯರು ಕೃಷ್ಣಮೂರ್ತಿಯನ್ನು ಕಂಡಾಗ, "ನಿಮ್ಮ ಮಗನ್ನ ನೋಡಿ ನಮ್ಮ ಮಕ್ಕಳು ದಾರಿಗೆ ಬಂದಂಗಾಯಿತು, ನಿಮ್ಮ ಮಗನ್ನ ದ್ಯಾವ್ರು ಸಂದಾಗಿಟ್ಟರಲಿ ಸೋಮಿ" ಎಂದು ಎರಡೂ ಕೈಯೆತ್ತಿ ನಮಸ್ಕರಿಸುವರು.

ಕೃಷ್ಣಮೂರ್ತಿ ಮಗನ ಬಗ್ಗೆ ಹೆಮ್ಮೆಯಿಂದ ಹೆಂಡತಿ ಸುಶೀಲಳಿಗೆ ಹೇಳುವರು. 'ಯಾವುದೇ ಐಟಿ ಕಂಪನಿ, ಅಥವಾ ಬ್ಯಾಂಕಿನ ಸಂಬಳಕ್ಕಿಂತ ನಿನ್ನ ಮಗ ಹೆಚ್ಚು ಸಂಪಾದಿಸುತ್ತಾನೆ ಕಣೆ'. ಅವರಿಬ್ಬರಿಗೂ ಮಗನಿಗೊಂದು ಒಳ್ಳೆಯ ಸಂಬಂಧ ನೋಡಿ ಬೇಗ ಮದುವೆ ಮಾಡಿ ಬಿಡಬೇಕು ಎನ್ನುವ ಆತುರ.

ಮಾದರಿ ರೈತನಾಗಿ ರೂಪುಗೊಂಡ, ಹಳ್ಳಿಯಲ್ಲೇ ನೆಲೆಸಿದ ಇವನ ಬಗ್ಗೆ ಅವನ ಸ್ನೇಹಿತರಿಗೆಲ್ಲಾ ಇವನ ಚಟುವಟಿಕೆಗಳ ಬಗ್ಗೆ ಕುತೂಹಲ ಮತ್ತು ಆಸಕ್ತಿ. ವಾರಾಂತ್ಯದ ರಜಾ ದಿನಗಳಲ್ಲಿ ಗುಂಪು ಗುಂಪಾಗಿ ಬಂದು ಇವರ ತೋಟದ ಮನೆಯಲ್ಲಿ ಇಳಿದುಕೊಂಡು, ಇವನ ಪ್ರಯೋಗಗಳನ್ನೆಲ್ಲಾ ನೋಡಿ ಹತ್ತಿರದ ಆನೆಗುಡ್ಡಕ್ಕೆ ಚಾರಣ ಮಾಡಿ, ದಳವಾಯಿ ಕೆರೆಯಲ್ಲಿ ಈಜಾಡಿ, ಅವನನ್ನು ಮೆಚ್ಚಿಕೊಳ್ಳುತ್ತಾ ಹೋಗುವರು. ಅವನ ಪಾಲಿ ಹೌಸ್ ನಲ್ಲಿ ಬೆಳೆದುನಿಂತ ಆಕರ್ಷಕ ಹೂವಿನ ಗಿಡಗಳ ಮಧ್ಯೆ ಸಿನಿಮಾ ತಂಡವೊಂದು ಯುಗಳ ಗೀತೆಯನ್ನು ಚಿತ್ರೀಕರಿಸಿದ ಮೇಲೆ ಅವನ ಖ್ಯಾತಿ ಸುತ್ತಮುತ್ತ ಮತ್ತು ಅವನ ಸ್ನೇಹಿತರ ಬಳಗದಲ್ಲಿ ಇನ್ನೂ ಹೆಚ್ಚಾಯಿತು.

ತಂದೆ ತಾಯಿಯರಿಗೆ, ಇವನಿಗೆ ಮದುವೆ ಮಾಡುವ ಆತಂಕ. ತಮ್ಮ ಬಂಧು ಬಳಗದಲ್ಲಿ ಎಲ್ಲರಿಗೂ ಮದುವೆಯ ಪ್ರಸ್ತಾಪ ಹೇಳಿ, ಅನುಕೂಲ ಕಂಡ ಹುಡುಗಿಯರ ಬಗ್ಗೆ ವಿಚಾರಿಸತೊಡಗಿದರು. ಹಲವಾರು ಪ್ರಸ್ತಾಪಗಳೇನೋ ಬರುತ್ತಿತ್ತು. ಆದರೆ ಅರ್ಧಕ್ಕರ್ಧ ಜಾತಕಗಳೇ ಕೂಡಿಬರುತ್ತಿರಲಿಲ್ಲ. ಇನ್ನು ಜಾತಕ ಕೂಡಿ ಬಂದರೂ, ಇವನು ಹಳ್ಳಿಯಲ್ಲಿ ಬೇಸಾಯಗಾರನಾಗಿದ್ದಾನೆ ಎಂದು ತಿಳಿದು ಹುಡುಗಿಯ ಕಡೆಯವರು ಮಾತನ್ನು ಮುಂದುವರಿಸುತ್ತಲೇ ಇರಲಿಲ್ಲ.

ಸುಮಾರು ಎರಡು ಮೂರು ವರ್ಷ ಯಾವುದೂ ಕೈಗೂಡಲಿಲ್ಲ. ಕೆಲ ಹಿತೈಷಿಗಳು, ಹೊನ್ನಳ್ಳಿ ಬಿಟ್ಟು ಪಿರಿಯಾಪಟ್ಟಣದಲ್ಲಿ ಮನೆ ಮಾಡಿ, ಅದು ಪಟ್ಟಣವಾದುದರಿಂದ ಹುಡುಗಿಯರು ಮದುವೆಗೆ ಒಪ್ಪಬಹುದು ಮತ್ತು ಹೊನ್ನಳ್ಳಿ ಹತ್ತಿರವೇ ಇರುವುದರಿಂದ ಹೂದೋಟ, ಗದ್ದೆ, ತೋಟಗಳನ್ನು ನೋಡಿಕೊಳ್ಳುವುದು ಕಷ್ಟವಾಗಲಾರದು ಎನ್ನುವ ಸೂಚನೆ ಮೇರೆಗೆ ಪಿರಿಯಾಪಟ್ಟಣದಲ್ಲಿ ಬಾಡಿಗೆಗೊಂದು ಒಳ್ಳೆಯ ತಾರಸಿ ಮನೆಯನ್ನು ಕೊಂಡು ಅಲ್ಲಿಗೆ ಹೋದರು. ಆದರೂ ಸಂಬಂಧಗಳಾವುವೂ ಕೂಡಿ ಬರಲಿಲ್ಲ. ಕಾರ್ತೀಕನ ಗೆಳೆಯರು ಇವನ ವಿವರಗಳನ್ನು ಕೆಲವು ಮ್ಯಾರೇಜ್ ಬ್ಯೂರೊ ವೆಬ್ ಸೈಟ್ ನಲ್ಲಿ ನೋಂದಾಯಿಸಿ, ಇವನ ವೃತ್ತಿ ವ್ಯವಸಾಯ ಎನ್ನುವುದಕ್ಕೆ ಬದಲಾಗಿ 'ಅಗ್ರಿ ಬಿಸಿನೆಸ್' ಎಂದು ನಮೂದಿಸಿದ್ದರು. ಹುಡುಗಿಯ ಕಡೆಯವರು 'ಅಗ್ರಿ ಬಿಸಿನೆಸ್' ಅಂದರೆ ಏನು ಎಂದು ಕೂಲಂಕುಷವಾಗಿ ವಿಚಾರಿಸಿ, ಹೂವು ಬೆಳೆದು ಮಾರುವುದು, ವ್ಯವಸಾಯವಲ್ಲದೆ ಮತ್ತೇನು ಎಂದು ಮಾತು ಮುಂದುವರೆಸುತ್ತಿರಲಿಲ್ಲ.

'ನಮ್ಮ ಕಾರ್ತೀಕನಿಗೊಂದು ಹೆಣ್ಣಿದ್ದರೆ ಹೇಳಿ' ಎಂದು ಕಂಡ ಕಂಡವರಿಗೆಲ್ಲಾ ಸುಶೀಲಮ್ಮ ಕೇಳಿಕೊಳ್ಳುವರು. ಮತ್ಯಾರೋ ಸೂಚಿಸಿದರು– 'ತೀರ್ಥಳ್ಳಿ, ಶಿರಸಿ, ಯಲ್ಲಾಪುರ ಅಂತಹ ಕಡೆ ತೋಟ ಮನೆ ನೋಡಿಕೊಂಡಿರುವ ಹಲವಾರು ಬ್ರಾಹ್ಮಣ ಕುಟುಂಬಗಳಿವೆ, ಅಲ್ಲಿನ ಹುಡುಗಿಯರು ಮದುವೆಗೆ ಒಪ್ಪಬಹುದು, ಪ್ರಯತ್ನಪಡಿ' ಎಂದು ಸೂಚಿಸಿದರು.

ಕೃಷ್ಣಮೂರ್ತಿ ಮತ್ತು ಅವನ ಮೈದುನ ಗೋಪಾಲ ಶಿರಸಿ, ಸಿದ್ದಾಪುರ, ಚಿಕ್ಕಮಗಳೂರು, ಶೃಂಗೇರಿ ಮತ್ತು ಘಟ್ಟದ ಕೆಳಗೆ ಕುಂದಾಪುರ ಉಡುಪಿ ಎಲ್ಲವನ್ನೂ ಸುತ್ತು ಹಾಕಿ, ನಾಲ್ಕು ಜನ ತಿಳಿದವರಿಗೆ ಹೇಳಿ ಮತ್ತು ಅಲ್ಲಿನ ಬ್ರಾಹ್ಮಣ ಸಂಘಗಳಲ್ಲಿ, ವಧು ಬೇಕೆಂದು ನೋಂದಾಯಿಸಿದರು. ಇವರು ಮದುವೆಯ ಪ್ರಸ್ತಾಪ ಮಾಡುವಾಗ ಅಲ್ಲಿನ ಅನೇಕರು ಇಲ್ಲೇ ಇದ್ದುಕೊಂಡು ತೋಟ, ಗದ್ದೆ ನೋಡಿಕೊಳ್ಳುವ ನಮ್ಮ ಹುಡುಗರಿಗೇ ಹೆಣ್ಣು ಸಿಗುತ್ತಿಲ್ಲ. ಈಗಿನ ಹುಡುಗಿಯರಿಗೆ ಪಟ್ಟಣ ಜೀವನ ಬೇಕು, ನಮಗೂ ಹುಡುಗಿಯರನ್ನು ಹುಡುಕಿ ಸಾಕಾಗಿಬಿಟ್ಟಿದೆ'ಎಂದು ದೀರ್ಘ ನಿಟ್ಟುಸಿರು ಬಿಡುವರು. ಇನ್ನೂ ಕೆಲವರು 'ನಿಮಗೆ ಗೊತ್ತಿಲ್ಲವೇ ಸಾರ್, ನಮ್ಮ ರಾಮಪುರ ಮಠದ ಸ್ವಾಮಿಗಳು, ಗಂಡುಮಕ್ಕಳ ತಂದೆತಾಯಿಯರು ಕಷ್ಟಪಡುವುದನ್ನು ನೋಡಿ, ಬ್ರಾಹ್ಮಣ ಹುಡುಗಿಯರೇ ಬೇಕು ಎಂದು ಹುಡುಕಬೇಡಿ, ಬೇರೆ ಜಾತಿಯಾದರೂ ಪರವಾಗಿಲ್ಲ, ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಹರಿಜನರನ್ನು ಬಿಟ್ಟು, ಯಾವ ಜಾತಿಯ ಹುಡುಗಿಯರಾದರೂ ಪರವಾಗಿಲ್ಲ, ಅವರಿಗೆ ಪಂಚಗವ್ಯ ಕೊಟ್ಟು ಶುದ್ಧಿ ಮಾಡಿಸಿ, ಮದುವೆ ಆಗಬಹುದು ಎಂದು ಆದೇಶ ಕೊಟ್ಟಿದ್ದಾರೆ. ಹಾಗಾಗಿ, ಇತ್ತೀಚೆಗೆ ಅನೇಕ ಅಂತರ್ಜಾತೀಯ ಮದುವೆಗಳು ನಮ್ಮ ಕಡೆ ನಡೆಯುತ್ತಿವೆ. ನೀವೂ ಹಳ್ಳಿಯ ಬದುಕಿಗೆ ಒಗ್ಗಿಕೊಳ್ಳುವ ಬೇರೆ ಜಾತಿಯ ಹುಡುಗಿಯನ್ನು ಹುಡುಕಿಕೊಳ್ಳಿ. ಈಗೇನು ಗೌಡರು, ಲಿಂಗಾಯಿತರು, ಕುರುಬರ ಜಾತಿಗಳಲ್ಲಿ ಹೆಚ್ಚು ಓದಿರುವ ಅನೇಕರಿದ್ದಾರೆ' ಎಂದು ಉಪದೇಶಿಸಿದರು.

ಮಗನಿಗೊಂದು ಮದುವೆಯಾಗಲಿ ಎನ್ನುವ ಆಸೆಯಿಂದ ಜಾತಕ, ಜ್ಯೋತಿಷ್ಯ ಮತ್ತು ಜಾತಿ ಎಲ್ಲವನ್ನೂ ಬಿಟ್ಟು ವಿಚಾರಿಸತೊಡಗಿದರು. ಸ್ವಲ್ಪ ಅನುಕೂಲಸ್ಥ ಗೌಡರು, ಲಿಂಗಾಯಿತರ ಮನೆಯ ಹುಡುಗಿಯರನ್ನು ಮಧ್ಯಸ್ಥಗಾರರ ಮೂಲಕ ವಿಚಾರಿಸಿದರೆ, ಅವರಿಗೆ ಇವರ ಬಗ್ಗೆ ಅನುಮಾನ. ಮೇಲ್ಜಾತಿಯವರು ಅವರ ಜಾತಿಯ ಹುಡುಗಿಯರನ್ನು ಬಿಟ್ಟು ನಮ್ಮ ಮಕ್ಕಳನ್ನು ಕೇಳುತ್ತಾರೆ ಅಂದರೆ 'ಹುಡುಗನಿಗೆ ಏನೋ ಐಬಿರಬೇಕು' ಎಂದು ಅನುಮಾನ ಪಡುವರು ಮತ್ತು ಒಪ್ಪುತ್ತಿರಲಿಲ್ಲ. ಅದೂ ಒಂದಿಷ್ಟು ದಿನ ನಡೆಯಿತು.

ಒಂದು ದಿನ ಗೆಳೆಯರಾದ ಮಾಚಯ್ಯ, 'ನೋಡಿ, ಹುಡುಗಿಗೆ ತಂದೆ ತಾಯಿ ಯಾರೂ ಇಲ್ಲದ ತಬ್ಬಲಿಯಾದರೆ ಒಳ್ಳೆಯದು. ಹಿಂದು ಮುಂದಿಲ್ಲದ ಹುಡುಗಿ, ನಿಮ್ಮಗಳನ್ನೇ ನೆಚ್ಚಿಕೊಂಡು ನಿಮ್ಮನೆಗೆ ಹೊಂದಿಕೊಳ್ಳುತ್ತಾಳೆ. ಹುಣಸೂರಿನ ಹತ್ತಿರ ಒಂದು ಅನಾಥಾಶ್ರಮ ಇದೆ. ಅಲ್ಲೇ ಬೆಳೆದ ಒಂದು ಹುಡುಗಿ, ಪಿ.ಯು.ಸಿ. ತನಕ ಓದಿಕೊಂಡು, ಅಲ್ಲೇ ಆಶ್ರಮದಲ್ಲಿ ಕೆಲಸ ಮಾಡಿಕೊಂಡಿದ್ದಾಳೆ. ಯಾವ ಜಾತಿಯೋ ಗೊತ್ತಿಲ್ಲ. ಅಂತಹ ಹುಡುಗಿಯಾದರೆ ಒಳ್ಳೆಯದು' ಎಂದು ಸೂಚಿಸಿದರು.

ಹಿಂದಿನಿಂದಲೂ ಅನಾಥಾಶ್ರಮದ ಉಸ್ತುವಾರಿಯನ್ನು ನೋಡಿಕೊಳ್ಳುವ ಗಾಂಧಿವಾದಿ ಬಸವರಾಜಯ್ಯ, ಕೃಷ್ಣಮೂರ್ತಿಗೆ ಹಳೆ ಪರಿಚಯ. ಯಾವ ಸುಳಿವನ್ನೂ ಕೊಡದೆ, ಅನಾಥಾಶ್ರಮಕ್ಕೆ ಹೋಗಿ ಹುಡುಗಿ ರಾಜಲಕ್ಷ್ಮಿಯನ್ನು ನೋಡಿದರು. ಚೂಟಿಯಾಗಿ ಚಟುವಟಿಕೆಯಿಂದ ಓಡಾಡಿಕೊಂಡಿದ್ದ ರಾಜಲಕ್ಷ್ಮಿಯನ್ನು ನೋಡಿ ಕೃಷ್ಣಮೂರ್ತಿಗೆ ಪರವಾಗಿಲ್ಲ ಎನ್ನಿಸಿತು. ಮನೆಯಲ್ಲಿ ಸುಶೀಲಮ್ಮ

## ತಲೆ ತಗ್ಗಿ

ಬೀದೀಲಿ ತಲೆ ತಗ್ಗಿ
ಅನ್ನೋದು ನಮ್ಮಜ್ಜಿ ವರಾತ
ಎಲ್ಲಾರ್ ಕೈಲೂ ಸೆಲ್ ಬಂದು
ತಲೆ ತಗ್ಗಿ ಹುಡುಗ್ರು ಸೇರವೆ ಪ್ರಪಾತ!

– ಸಂತೆಬೆನ್ನೂರು ಫೈಜ್ನಾಟ್ರಾಜ್



ಈಶ್ವರ